ಒಳ್ಳೆಯ ನೀರು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಮತ್ತು ಕಾಯಿಲೆಗೆ ಒಳಗಾಗಿ ವಾಂತಿಭೇದಿ, ಜ್ವರದಿಂದ ಮಲಗಿಬಿಟ್ಟಿದ್ದಾರೆ, ಆ ಜನರನ್ನು ಟ್ರೀಟ್ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದರ ಬಗ್ಗೆ ವಿವರ ಕೊಡಬೇಕು.

ಶ್ರೀಮತಿ ಮೋಟಮ್ಮ :-ಕುಡಿಯುವ ನೀರಿನ ಸಮಸ್ಯೆ ಬಗ್ಗೆ ನಾನು ಸಹ ಗಮನ ಸೆಳೆಯುವ ಸೂಚನೆ ಕಳುಹಿಸಿದ್ದೆ.

ಉಪಾಧ್ಯಕ್ಷರು:- ಅವರು ಹಾಸನದ್ದು ಹೇಳುತ್ತಿದ್ದಾರೆ. ನೀವು ಬೇರೆ ಹೇಳುತ್ತಿದ್ದೀರಿ.

ಶ್ರೀ ಕೆ.ಹೆಚ್.ಹನುಮೇಗೌಡ:- ಬಹಳ ತೊಂದರೆಯಾಗಿದೆ. ನೂರು ಜನ ಮಲಗಿಬಿಟ್ಟಿದ್ದಾರೆ.

ಉಪಾಧ್ಯಕ್ಷರು:- ನೀವು ಹೇಳಿದ್ದೀರಿ. ಮಂತ್ರಿಗಳು ಏನು ಹೇಳುತ್ತಾರೋ ನೋಡೋಣ.

ಶ್ರೀ ಕೆ.ಹೆಚ್.ಹನುಮೇಗೌಡ:- ಅವರು ಆಗಬಹುದು ಎಂದು ಹೇಳುತ್ತಾರೆ. ಸಂಬಂಧಪಟ್ಟ ಮಂತ್ರಿಗಳು ಹೇಳಬೇಕು. ಅವರು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಂ.ವೀರಪ್ಪ ಮೊಯಿಲಿ:-ಮಾನ್ಯ ಹನುಮೇಗೌಡರಿಗೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡಬೇಕು. ಅವರ ಬಗ್ಗೆ ಬಹಳ ಮಮಕಾರ ಇದೆ. ನಮ್ಮ ಬಗ್ಗೆ ಮಮಕಾರ ಇಲ್ಲ. ತಮಗೆ ಇವತ್ತು ಸಂಜೆ ಒಳಗಡೆ ಅಲ್ಲಿ ಪರಿಸ್ಥಿತಿ ಏನಿದೆ ಮತ್ತು ಏನು ಪರಿಹಾರ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ವಿವರವಾದ ವರದಿಯನ್ನು ಕೊಡುತ್ತೇವೆ.

ಪ್ರಕಟಣೆ

ಉಪಾಧ್ಯಕ್ಷರು:-ವಿಧಾನಸಭಾ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಹಾಗೂ ಶ್ರೀ ಸಿ.ಬೈರೇಗೌಡರನ್ನು ದಿನಾಂಕ 26ನೇ ಮಾರ್ಚ್ 92 ರಂದು ಸಮಯ ಮಧ್ಯಾಹ್ನ 12-15 ಗಂಟೆಯಲ್ಲಿ ವಿಧಾನಸೌಧದ ಪಶ್ಚಿಮ ದ್ವಾರದ ಮುಂದೆ ಬಂಧಿಸಿ ಅದೇ ದಿನ ಮಧ್ಯಾಹ್ನ 1 ಗಂಟೆಗೆ ಬಿಡುಗಡೆ ಮಾಡಲಾಯಿತು - ಎಂದು ಸಬ್ ಇನ್‌ಸ್ಪೆಕ್ಟರ್ ಆಫ್ ಪೋಲೀಸ್, ವಿಧಾನಸೌಧ ಠಾಣೆ, ಬೆಂಗಳೂರು, ಇವರಿಂದ ನಮಗೆ ಸಂದೇಶ ಬಂದಿರುತ್ತದೆ. ಈಗ ಸಭೆಯನ್ನು ಮುಂದೂಡಿ ಪುನಃ ಎರಡೂವರೆ ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ಮಧ್ಯಾಹ್ನ 2.40 ಗಂಟೆಗೆ ಪುನಃ ಸಮಾವೇಶಗೊಂಡಿತು. ಮಾನ್ಯ ಉಪಾಧ್ಯಕ್ಷೆಯವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ನಿಯಮ 334 ರ ಮೇರೆಗೆ

ವಿಷಯ : (1) ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ ಶಂಕರನಹಳ್ಳಿಯ ಹತ್ತಿರ ಯಗಚಿ ನದಿಗೆ ಏತ ನೀರಾವರಿ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ.

ಶ್ರೀ ಕೆ.ಹೆಚ್.ಹನುಮೇಗೌಡ:- (ಹಾಸನ):-ಸನ್ಮಾನ್ಯ ಉಪಾಧ್ಯಕ್ಷಿಣಿಯರೆ, ಹಾಸನ ಕ್ಷೇತ್ರದ ಕಟ್ಟಾಯ ಹೋಬಳಿ ಶಂಕರನಹಳ್ಳಿಯ ಹತ್ತಿರ ಯಗಚಿ ನದಿಗೆ ಆಗಾಗ್ಗೆ ಬರಗಾಲಕ್ಕೆ ತುತ್ತಾಗುವ ಪ್ರದೇಶಕ್ಕೆ ನೀರೊದಗಿಸಲು 1980ನೇ ಇಸವಿಯಲ್ಲಿ ಒಂದು ಏತ ನೀರಾವರಿ ಯೋಜನೆಯನ್ನು ಕಾರ್ಯಗತಮಾಡಲು ರಾಜ್ಯದ ಬಜೆಟ್‌ಗೆ ಸೇರಿಸಲಾಯಿತು. ಆದರೆ ಈ ಯೋಜನೆಯು ಇನ್ನೂ ಕಾರ್ಯಗತವಾಗಲಿಲ್ಲ. 1990ನೇ ಇಸವಿಯಲ್ಲಿ ಈ ಯೋಜನೆಯನ್ನು ಕಾರ್ಯಗತವಾಡಲು ಟೆಂಡರ್ ಕರೆಯಲಾಯಿತು. ಆದರೆ ಇದುವರೆಗೂ ಈ ಯೋಜನೆ ಕಾರ್ಯಗತ ಮಾಡದಿರುವ ಬಗ್ಗೆ ಮಾನ್ಯ ಸಣ್ಣ ನೀರಾವರಿ ಇಲಾಖೆಯ ರಾಜ್ಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್.ಪಾಟೀಲ್:- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರಾದ ಹನುಮೇಗೌಡರು ಹೇಳಿದಂಥ ವಿಚಾರವನ್ನು ಮಾನ್ಯ ಸಣ್ಣ ನೀರಾವರಿ ಯೋಜನಾ ಮಂತ್ರಿಗಳ ಗಮನಕ್ಕೆ ತಂದು ಮುಂದಿನ ಕ್ರಮ ತೆಗೆದುಕೊಳ್ಳುವಂತೆ ಸೂಚಿಸುತ್ತೇನೆ.